# GOVERNMENT OF KARNATAKA

## KARNATAKA LOKAYUKTA

No.UPLOK-2/DE/273/2018/ARE-14

Multi Storied Building,
Dr. B.R. Ambedkar Veedhi,
Bengaluru-560 001
Date: **31/03/2022**

## RECOMMENDATION

Sub:- Departmental inquiry against;
Sri S. Rajakumar, Panchayath Development Officer,
Kaliyur Grama Panchayath, T. Narasipura Taluk,
Mysuru District – Reg.

Ref:- 1) Govt. Order No. ಗ್ರಾಅಪ/225/ಗ್ರಾಪಂಕಾ/2018 Bengaluru dated 30/5/2018

2) Nomination order No.UPLOK-2/DE/273/2018, Bengaluru dated 11/6/2018 of Upalokayukta, State of Karnataka, Bengaluru

3) Inquiry Report dated 29/03/2022 of Additional Registrar of Enquiries-14, Karnataka Lokayukta, Bengaluru

----

The Government by its order dated 26/3/2018 initiated the disciplinary proceedings against Sri S. Rajakumar, Panchayath Development Officer, Kaliyur Grama Panchayath, T. Narasipura Taluk, Mysuru District (hereinafter referred to as Delinquent Government Official, for short as DGO) and entrusted the Departmental Inquiry to this Institution.

2. This Institution by Nomination Order No.UPLOK-2/DE/273/2018, Bengaluru dated 11/6/2018 nominated Additional Registrar of Enquiries-7, Karnataka Lokayukta, Bengaluru, as the Inquiry Officer to frame charges and to conduct Departmental Inquiry against DGO for the alleged charge of misconduct, said to have been committed by him. Subsequently, by Order No.UPLOK-1&2/DE/Transfers/2018 dated 6/8/2018, the Additional Registrar of

Enquiries-14, Karnataka Lokayukta, Bengaluru was re-nominated as inquiry officer to conduct departmental inquiry against DGO.

3. The charge framed against DGO Sri S. Rajakumar, Panchayath Development Officer, Kaliyur Grama Panchayath, T. Narasipura Taluk, Mysuru District was to the effect that the DGO and the then President of Kaliyur Grama Panchayath, Smt. Honnamma have issued No Objection Certificate on 7/9/2013 for getting electricity connection towards the supply water from Cauveri River for the use of Bannari Amman Sugar Factory at Kunthur Village, without there being any approval from the Panchayath, in violation of the provision of Karnataka Grama Swaraj & Panchayath Raj Act, 1993.

4. The Inquiry Officer (Additional Registrar of Enquiries-14) on proper appreciation of oral and documentary evidence has held that the Disciplinary Authority has proved the above charge against DGO Sri S. Rajakumar, Panchayath Development Officer, Kaliyur Grama Panchayath, T. Narasipura Taluk, Mysuru District.

5. On re-consideration of inquiry report and taking note of the totality of the circumstances of the case, I do not find any reason to interfere with the findings recorded by the Inquiry Officer. It is hereby recommended to the Government to accept the report of Inquiry Officer.

6. As per First Oral Statement submitted by DGO, he is due to retire from service on 31/5/2026.

7. Having Regard to the nature of charge proved against DGO Sri S. Rajakumar, Panchayath Development Officer, Kaliyur Grama

Panchayath, T. Narasipura Taluk, Mysuru District, it is recommended to the Government for imposing penalty of withholding two annual increments payable to DGO Sri S.Rajakumar without cumulative effect.

8. Action taken in the matter shall be intimated to this Authority.

Connected records are enclosed herewith.

**(JUSTICE B.S.PATIL)**
Upalokayukta,
State of Karnataka,
Bengaluru

# ಕರ್ನಾಟಕ ಲೋಕಾಯುಕ್ತ

ನಂ.ಉಪಲೋಕ್-2/ಡಿಇ-273/2018/ಎ.ಆರ್.ಇ-14

ಡಾ॥ ಬಿ.ಆರ್.ಅಂಬೇಡ್ಕರ್ ವೀದಿ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು-560001,
ದಿನಾಂಕ: 29/03/2022.

## ವಿಚಾರಣಾ ವರದಿ

**ಉಪಸ್ಥಿತರು: ಸುದೇಶ್ ರಾಜಾರಾಮ್ ಪರದೇಶಿ,**
ಅಪರ ನಿಬಂಧಕರು ವಿಚಾರಣೆಗಳು-14,
ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

**ವಿಷಯ:** ಆ.ಸ.ನೌಕರ ಶ್ರೀ. **ರಾಜಕುಮಾರ,** ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕಲಿಯೂರು ಗ್ರಾಮ ಪಂಚಾಯಿತಿ, ಟಿ. ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ ಇವರ ವಿರುದ್ಧದ ಇಲಾಖಾ ವಿಚಾರಣೆ ಕುರಿತು.

**ಉಲ್ಲೇಖ:**
1. ಕಂಪ್ಲೆಂಟ್/ಉಪಲೋಕ್/ಎಂವೈಎಸ್/2348/2014/ಉನಿವಿ-4 ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ ದಿನಾಂಕ: 26/03/2018.
2. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/225/ಗ್ರಾಪಂಕಾ/2018, ಬೆಂಗಳೂರು, ದಿನಾಂಕ: 30/05/2018.
3. ನಾಮನಿರ್ದೇಶನ ಸಂಖ್ಯೆ.ಉಪಲೋಕ್-2/ಡಿಇ/273/2018, ಬೆಂಗಳೂರು ದಿನಾಂಕ: 11/06/2018.
4. Order No.UPLOK-1&2/DE/Transfers/2018 Bengaluru, Dtd: 06/08/2018 file is transferred from ARE-7 to ARE-14.

* * * * * *

ಈ ದೂರನ್ನು, ದೂರುದಾರರಾದ **ಶ್ರೀಮತಿ. ಶಾಂತ** ಬಿನ್ ಚಿಕ್ಕೂಸು, ಕಲಿಯೂರು ಗ್ರಾಮ, ಟಿ. ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ ರವರು ಆಪಾದಿತ ಸರ್ಕಾರಿ ನೌಕರ **ಶ್ರೀ. ರಾಜಕುಮಾರ,** ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕಲಿಯೂರು ಗ್ರಾಮ ಪಂಚಾಯಿತಿ, ಟಿ. ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ ಇವರ ವಿರುದ್ಧ ಸಲ್ಲಿಸಿರುತ್ತಾರೆ, ತಮ್ಮ ದೂರಿನಲ್ಲಿ

ಆ.ಸ.ನೌ ರವರು ಕಲಿಯೂರು ಗ್ರಾಮ ಪಂಚಾಯಿತಿಯ ಪಿ.ಡಿ.ಓ ರವರು ತಮ್ಮ ವ್ಯಾಪ್ತಿಯಲ್ಲಿರುವ

1) ಕುಂತೂರು ಸಕ್ಕರೆ ಕಾರ್ಖಾನೆಗೆ ಪಂಚಾಯಿತಿ ನಡುವಳಿಯಿಲ್ಲದೇ ಕಾವೇರಿ ನೀರು ಸರಬರಾಜಿಗೆ ನಿರಾಪೇಕ್ಷಣಾ ಪತ್ರವನ್ನು ರೂ.5 ಲಕ್ಷ ಪಡೆದು ಕೊಟ್ಟಿರುತ್ತಾರೆ.

2) ನೀರು ಸರಬರಾಜಿಗೆ ಬಿಲ್ ಇಲ್ಲದೇ ರೂ.6 ಲಕ್ಷ ಹಣ ಬ್ಯಾಂಕಿನಿಂದ ಪಡೆದಿರುತ್ತಾರೆ.

3) ವಸತಿ ಉಳ್ಳವರಿಗೆ ಮನೆಗಳನ್ನು ಕೊಟ್ಟಿರುತ್ತಾರೆ.

4) ಕೆಲವು ಫಲಾನುಭವಿಗಳಿಗೆ ವಿತರಿಸಿದ ಚೆಕ್ಕುಗಳು ಅಮಾನ್ಯಗೊಂಡಿರುತ್ತದೆ.

5) ಶೌಚಾಲಯಗಳನ್ನು ನಿರ್ಮಿಸಲು ಫಲಾನುಭವಿಗಳ ಸಹಿ ಮಾಡಿದ ಬ್ಯಾಂಕಿನಿಂದ ಹಣ ಡ್ರಾ ಮಾಡಿ ಅವರ ಕೈಗೆ ಕೊಡಲಾಗಿದೆ ಹಾಗೂ ಎದುರುದಾರರು ಈ ಹಿಂದೆಯೂ ಇದೇ ರೀತಿಯಾಗಿ ಅವ್ಯವಹಾರ ಮಾಡಿ 3 ಬಾರಿ ಅಮಾನತ್ತುಗೊಂಡಿರುತ್ತಾರೆ ಅಂತಾ ಸಲ್ಲಿಸಿರುತ್ತಾರೆ.

ಆದ್ದರಿಂದ ಆ.ಸ.ನೌ ರವರ ವಿರುದ್ಧ ಕ್ರಮ ತೆಗೆದುಕೊಳ್ಳಲು ತಿಳಿಸಿರುತ್ತಾರೆ.

2. ತನಿಖೆ ಪೂರ್ಣಗೊಂಡ ನಂತರ, ಸರ್ಕಾರಕ್ಕೆ ಕರ್ನಾಟಕ ಲೋಕಾಯುಕ್ತ ಅಧಿನಿಯಮದ ಕಲಂ 12(3)ರಡಿಯಲ್ಲಿ ಉಲ್ಲೇಖ (1)ರಲ್ಲಿ ಕಾಣಿಸಿದಂತೆ, ವರದಿ ಸಲ್ಲಿಸಿದ್ದು, ಸದರಿ ವರದಿಯನ್ವಯ ಕರ್ನಾಟಕ ಸರ್ಕಾರವು ಉಲ್ಲೇಖ (2)ರಲ್ಲಿ ಕಾಣಿಸಿದಂತೆ, ದಿನಾಂಕ: 30/05/2018ರ ಆದೇಶದಂತೆ, ಮಾನ್ಯ ಉಪಲೋಕಾಯುಕ್ತ ರವರಿಗೆ ವಿಚಾರಣೆ ಮಾಡಿ ವರದಿ ಸಲ್ಲಿಸುವಂತೆ ವಹಿಸಿದ್ದು, ಮಾನ್ಯ ಉಪಲೋಕಾಯುಕ್ತ ರವರು ದಿನಾಂಕ: 11/06/2018 ರಂದು ಅಪರ ನಿಬಂಧಕರು, ವಿಚಾರಣೆಗಳು–7 ರವರಿಗೆ ವಿಚಾರಣೆ ಮಾಡಿ, ವರದಿ ಸಲ್ಲಿಸುವಂತೆ ಉಲ್ಲೇಖ (3)ರಲ್ಲಿ ಕಾಣಿಸಿದಂತೆ ನಾಮನಿರ್ದೇಶನ ಮಾಡಿದ್ದು, ಉಲ್ಲೇಖ (4) ರಂತೆ ಅಪರ ನಿಬಂಧಕರು ವಿಚಾರಣೆಗಳು–7 ರವರಿಂದ ಈ ಕಡತ ಅಪರ ನಿಬಂಧಕರು ವಿಚಾರಣೆಗಳು–14 ರವರಿಗೆ ವರ್ಗಾವಣೆಗೊಂಡಿರುತ್ತದೆ.

3. ನಾಮನಿರ್ದೇಶನದ ಆದೇಶದಂತೆ, ಆ.ಸ.ನೌ ಶ್ರೀ. ರಾಜಕುಮಾರ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕಲಿಯೂರು ಗ್ರಾಮ ಪಂಚಾಯಿತಿ, ಟಿ. ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ ರವರ ವಿರುದ್ಧ ದೋಷಾರೋಪಣೆ ***(Articles of Charge)*** ಅನ್ನು ಅಪರ ನಿಬಂಧಕರು, ವಿಚಾರಣೆಗಳು–7 ರವರು ರಚಿಸಿದ್ದು, ಸದರಿ ದೋಷಾರೋಪಣೆಯು ಅನುಬಂಧ–1 ಮತ್ತು ಅನುಬಂಧ–2 ರೊಂದಿಗೆ ದುರ್ನಡತೆ ಮತ್ತು ಕರ್ತವ್ಯಲೋಪಕ್ಕೆ ಸಂಬಂಧಪಟ್ಟಂತೆ, ವಿವರಗಳುಳ್ಳ ಆರೋಪವನ್ನು ಆ.ಸ.ನೌರವರಿಗೆ ದಿನಾಂಕ: 19/07/2018 ರಂದು ಈ ಕೆಳಕಂಡಂತೆ ಕಳುಹಿಸಲಾಗಿರುತ್ತದೆ.

## ಅನುಬಂಧ–1

## ದೋಷಾರೋಪಣೆ–1

2. ಅ) *ಆ.ಸ.ನೌ.ರ ಶ್ರೀ.ರಾಜಕುಮಾರ ಆದ ನೀವು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾಗಿ ಕಲಿಯೂರು ಗ್ರಾಮ ಪಂಚಾಯಿತಿ, ಟಿ.ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ನೀವು ಹಾಗೂ ಪಂಚಾಯತ್‌ನ ಮಾಜಿ ಅಧ್ಯಕ್ಷರಾದ ಶ್ರೀಮತಿ.ಹೊನ್ನಮ್ಮ ರವರು ಪಂಚಾಯತ್‌ನ ಅನುಮೋದನೆ ಪಡೆಯದೇ ದಿ:7–9–2013 ರಂದು ಕುಂತೂರು ಗ್ರಾಮದಲ್ಲಿ ಬಣ್ಣಾರಿಅಮ್ಮನ್ ಸಕ್ಕರೆ ಕಾರ್ಖಾನೆ ಉಪಯೋಗಕ್ಕೆ ಕಾವೇರಿ ನದಿಯಿಂದ ನೀರು ಸರಬರಾಜು ಮಾಡಲು ವಿದ್ಯುಚ್ಛಕ್ತಿ ಸಂಪರ್ಕಕ್ಕೆ ನಿರಾಕ್ಷೇಪಣಾ ಪತ್ರವನ್ನು ನೀಡಿ ಪಂಚಾಯತ್ ರಾಜ್ ಅಧಿನಿಯಮವನ್ನು ಉಲ್ಲಂಘಿಸಿ ಕರ್ತವ್ಯಲೋಪ ಎಸಗಿರುತ್ತೀರಿ.*

3. ನೀವು ನಿಮ್ಮ ಕರ್ತವ್ಯ ಪಾಲನೆಯಲ್ಲಿ ಸಂಪೂರ್ಣ ಪ್ರಾಮಾಣಿಕತೆ ಹಾಗೂ ಕರ್ತವ್ಯ ನಿಷ್ಠೆಯನ್ನು ಪಾಲಿಸದೆ ಮತ್ತು ಸರ್ಕಾರಿ ನೌಕರರಿಗೆ ಉಚಿತವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆ/ದುರ್ವರ್ತನೆಯಿಂದ ವರ್ತಿಸಿ, ಕರ್ನಾಟಕ ನಾಗರೀಕ ಸೇವಾ ನಿಯಮಗಳು (ನಡತೆ) 1966, ನಿಯಮ 3(1)(i) ರಿಂದ (iii) ರಡಿಯಲ್ಲಿ

ಉಕ್ತವಾದ ದುರ್ನಡತೆ ಎಸಗಿದ್ದೀರಿ ಎಂದು ನಿಮ್ಮ ಮೇಲೆ ದೋಷಾರೋಪಣೆಯನ್ನು ಮಾಡಲಾಗಿದೆ.

## ಅನುಬಂಧ–2

## ದೋಷಾರೋಪಣೆಯ ವಿವರ

## (ಸ್ಟೇಟ್‌ಮೆಂಟ್ ಆಫ್ ಇಂಪ್ಯೂಟೇಷನ್ ಆಫ್ ಮಿಸ್‌ಕಾಂಡೆಕ್ಟ್)

4. ಶ್ರೀಮತಿ. ಶಾಂತ ಬಿನ್ ಚಿಕ್ಕೂಸು, ಕಲಿಯೂರು ಗ್ರಾಮ, ಟಿ.ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಶ್ರೀ.ರಾಜಕುಮಾರ ಆದ ನೀವು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾಗಿ ಕಲಿಯೂರು ಗ್ರಾಮ ಪಂಚಾಯಿತಿ, ಟಿ.ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ ರವರ ವಿರುದ್ಧ ನೀಡಿದ ದೂರಿನನ್ವಯ ಪ್ರಕರಣವನ್ನು ದಾಖಲಿಸಿಕೊಂಡು ತನಿಖೆಯನ್ನು ಕೈಗೊಳ್ಳಲಾಗಿತ್ತು.

5. ಪ್ರಕರಣದ ಸಂಕ್ಷಿಪ್ತ ಸಾರಾಂಶ:– ದೂರುದಾರರು ತಮ್ಮ ದೂರಿನಲ್ಲಿ ಆ.ಸ.ನೌ.ರರು ತಮ್ಮ ಪಂಚಾಯತ್ ವ್ಯಾಪ್ತಿಯಲ್ಲಿರುವ ಕುಂತೂರು ಸಕ್ಕರೆ ಕಾರ್ಖಾನೆಗೆ ಪಂಚಾಯತ್ ನಡವಳಿಯಿಲ್ಲದೆ ಕಾವೇರಿ ನೀರು ಸರಬರಾಜಿಗೆ ನಿರಾಪೇಕ್ಷಣಾ ಪತ್ರವನ್ನು ರೂ.5.00 ಲಕ್ಷ ಪಡೆದು ಕೊಟ್ಟಿದ್ದು, ನೀರು ಸರಬರಾಜಿಗೆ ಬಿಲ್ ಇಲ್ಲದೆ ರೂ.6.00 ಲಕ್ಷ ಹಣವನ್ನು ಬ್ಯಾಂಕ್‌ನಿಂದ ಪಡೆದಿದ್ದಾರೆ. ವಸತಿಯುಳ್ಳವರಿಗೆ ಮನೆಗಳನ್ನು ಕೊಟ್ಟಿದ್ದು, ಕೆಲವು ಫಲಾನುಭವಿಗಳಿಗೆ ವಿತರಿಸಿದ ಚೆಕ್‌ಗಳು ಅಮಾನ್ಯಗೊಂಡಿವೆ. ಶೌಚಾಲಯಗಳನ್ನು ನಿರ್ಮಿಸಲು ಫಲಾನುಭವಿಗಳ ಸಹಿ ಮಾಡಿಸಿ, ಬ್ಯಾಂಕ್‌ನಿಂದ ಹಣ ಡ್ರಾ ಮಾಡಿ, ಅವರಿಗೆ ಕೊಡಲಾಗಿದೆ ಎಂದು ಆ.ಸ.ನೌ.ರರು ಹೇಳಿದ್ದು, ಆ.ಸ.ನೌ.ರರು ಈ ಹಿಂದೆಯೂ ಇದೇ ರೀತಿಯಾಗಿ ಅವ್ಯವಹಾರ ಮಾಡಿ, ಮೂರು ಬಾರಿ ಅಮಾನತ್ತುಗೊಂಡಿರುವುದಾಗಿ ಆಪಾದಿಸಿದ್ದರು.

6. ದೂರಿನ ಬಗ್ಗೆ ವರದಿ ಸಲ್ಲಿಸುವಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಮೈಸೂರು (ಇನ್ನು ಮುಂದೆ 'ತನಿಖಾಧಿಕಾರಿ' ಎಂದು ಕರೆಯಲಾಗುವುದು) ರವರಿಗೆ ಸೂಚಿಸಿದ್ದು, ಅದರಂತೆ ಸದರಿಯವರು ತಮ್ಮ ವರದಿಯನ್ನು ಸಲ್ಲಿಸಿ ಗ್ರಾಮ ಪಂಚಾಯತ್ ಅನುಮೋದನೆ ಪಡೆಯದೇ, ಆ.ಸ.ನೌ.ರರು ಹಾಗೂ ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷರಾದ ಶ್ರೀಮತಿ.ಹೊನ್ನಮ್ಮ ರವರು ಬಣ್ಣಾರಿಅಮ್ಮನ್ ಸಕ್ಕರೆ ಕಾರ್ಖಾನೆ ಉಪಯೋಗಕ್ಕೆ ಕಾವೇರಿ ನದಿಯಿಂದ ನೀರು ಸರಬರಾಜು ಮಾಡಲು ವಿದ್ಯುಚ್ಛಕ್ತಿ ಸಂಪರ್ಕಕ್ಕೆ ನಿರಾಪೇಕ್ಷಣಾ ಪತ್ರವನ್ನು ನೀಡಿದ್ದು, ಗ್ರಾಮ ಪಂಚಾಯತ್ ಅನುಮೋದನೆ ಪಡೆಯದೆ ಪಂಚಾಯತ್ ರಾಜ್ ಅಧಿನಿಯಮ ಉಲ್ಲಂಘಿಸಿ ನಿರಾಪೇಕ್ಷಣಾ ಪತ್ರ ನೀಡಿರುವ ಬಗ್ಗೆ ಸದರಿಯವರಿಂದ ಸಮಜಾಯಿಸಿ ನೀಡಲು ತಿಳಿಸಿದ್ದು, ಆ.ಸ.ನೌ.ರರು ತಮ್ಮ ಅಧಿಕಾರಾವಧಿಯಲ್ಲಿ ವಿವಿಧ ಯೋಜನೆಗಳಡಿಯಲ್ಲಿ ಅವ್ಯವಹಾರ ಎಸಗಿದ ಬಗ್ಗೆ ನಿವೃತ್ತ ಜಿಲ್ಲಾ ನ್ಯಾಯಾಧೀಶರಿಂದ ವಿಚಾರಣೆ ನಡೆಸಲಾಗಿದೆ ಎಂದು ತಿಳಿಸಿದ್ದರು.

7. ದೂರಿನ ಮೇಲೆ ಆಕ್ಷೇಪಣೆಯನ್ನು ಸಲ್ಲಿಸಲು ಸಾಕಷ್ಟು ಕಾಲಾವಕಾಶವನ್ನು ಕೊಟ್ಟರೂ ಸಹ ಆ.ಸ.ನೌ.ರರು ಆಕ್ಷೇಪಣೆಯನ್ನು ಸಲ್ಲಿಸಿರುವುದಿಲ್ಲ.

8. ದೂರು ಹಾಗೂ ಕಡತದಲ್ಲಿರುವ ದಾಖಲೆಗಳನ್ನು ಪರಿಶೀಲಿಸಿದಾಗ ಮೇಲ್ನೋಟಕ್ಕೆ ಆ.ಸ.ನೌಕರರಾದ ನೀವು ಸರ್ಕಾರಿ ಸೇವಕರಾಗಿದ್ದು ನಿಮ್ಮ ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ಕರ್ತವ್ಯ ನಿಷ್ಠತೆಯನ್ನು ತೋರಿಸದೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ವೇದ್ಯವಾದ್ದರಿಂದ ಆ.ಸ.ನೌಕರರಾದ ನಿಮ್ಮ ವಿರುದ್ಧ ಇಲಾಖಾ ವಿಚಾರಣೆ ನಡೆಸುವ ಸಂಬಂಧ ಕ್ರಮ ಜರುಗಿಸಬಹುದಾಗಿದೆ ಎಂದು ಕಂಡುಬಂದಿರುತ್ತದೆ.

9. ಮೇಲಿನ ಕಾರಣ ಹಾಗೂ ಕಡತದಲ್ಲಿನ ಆಧಾರಗಳಿಂದ ಆ.ಸ.ನೌಕರರು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು, 1966ರ, ನಿಯಮ 3(1) (ii) ಮತ್ತು (iii) ರಲ್ಲಿ ಹೇಳಿದಂತೆ ದುರ್ನಡತೆ/ದುರ್ವರ್ತನೆಯಿಂದ ವರ್ತಿಸಿ ಶಿಸ್ತು ಕ್ರಮಕ್ಕೆ ಬಾಧ್ಯರಾಗಿದ್ದಾರೆಂದು ಕಂಡುಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆಯ

ಕಲಂ 12(3) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ಆ.ಸ.ನೌಕರರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14–ಎ ರ ಅಡಿಯಲ್ಲಿ ಆ.ಸ.ನೌ.ರರ ವಿರುದ್ಧ ಇಲಾಖಾ ವಿಚಾರಣೆ ಮಾಡಲು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸು ಮಾಡಲಾಗಿತ್ತು. ಸದರಿ ಶಿಫಾರಸಿನ ಮೇರೆಗೆ ಸರ್ಕಾರವು ಆ.ಸ.ನೌಕರರ ವಿರುದ್ಧ ಇಲಾಖಾ ವಿಚಾರಣೆಯನ್ನು ಕೈಗೊಂಡು ವರದಿ ಸಲ್ಲಿಸಲು ಗೌರವಾನ್ವಿತ ಉಪಲೋಕಾಯುಕ್ತರವರಿಗೆ ವಹಿಸಿ ಆದೇಶ ಮಾಡಲಾಗಿದೆ. ಆದ್ದರಿಂದ ಈ ದೋಷಾರೋಪಣೆ.

4. ಈ ಮೇಲ್ಕಂಡ ದೋಷಾರೋಪಣೆಯನ್ನು (ಆರ್ಟಿಕಲ್ಸ್ ಆಫ್ ಚಾರ್ಜ್) ಆ.ಸ.ನೌರವರಿಗೆ ಕಳುಹಿಸಿದ್ದು, ಅದು ಜಾರಿಯಾದ ನಂತರ ಆ.ಸ.ನೌರವರು ದಿನಾಂಕ: 21/08/2018 ರಂದು ಹಾಜರಾಗಿದ್ದು, ಆ.ಸ.ನೌ.ರವರ ಪ್ರಥಮ ಮೌಖಿಕ ಹೇಳಿಕೆ, ನಿಯಮ–11 ಕೆ.ಸಿ.ಎಸ್ (ಸಿಸಿಎ) ರೂಲ್ಸ್ ರ ಅಡಿಯಲ್ಲಿ ದಾಖಲಿಸಲಾಗಿರುತ್ತದೆ. ಆ.ಸ.ನೌರವರು ತಪ್ಪೊಪ್ಪಿಕೊಳ್ಳದೆ, ಆರೋಪಗಳ ವಿಚಾರಣೆಯನ್ನು ಮಾಡಬಯಸಿರುತ್ತಾರೆ.

5. ಆ.ಸ.ನೌರವರಿಗೆ ದಾಖಲೆಗಳ ಪರಿಶೀಲನೆಗಾಗಿ ಅವಕಾಶ ಕಲ್ಪಿಸಿರುತ್ತದೆ.

6. ಮೇಲ್ಕಂಡ ಆಪಾದನೆಗಳಿಗೆ ಸಂಬಂಧಿಸಿದಂತೆ, ಆ.ಸ.ನೌ.ರವರಿಂದ ಲಿಖಿತ ಹೇಳಿಕೆಯನ್ನು ಕೇಳಲಾಗಿತ್ತು. ಆ.ಸ.ನೌರವರು ತಮ್ಮ ಲಿಖಿತ ಹೇಳಿಕೆಯಲ್ಲಿ ಸಲ್ಲಿಸಿರುವುದಿಲ್ಲ.

7. ಈ ವಿಚಾರಣೆಯಲ್ಲಿ, ಆ.ಸ.ನೌ.ರವರ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಶಿಸ್ತು ಪ್ರಾಧಿಕಾರವು ತಮ್ಮ ಪರವಾಗಿ ದೂರುದಾರರನ್ನು ಪಿ.ಡಬ್ಲೂ.1 ಎಂದು ಸಾಕ್ಷ್ಯ ಮಾಡಿಸಿದ್ದು, ನಿ.ಪಿ.1 ರಿಂದ 4 ರವರೆಗಿನ ದಾಖಲಾತಿಗಳನ್ನು ಗುರುತುಪಡಿಸಿಕೊಂಡಿರುತ್ತಾರೆ. ಶ್ರೀ. ಪಿ.ಎ

ಗೋಪಾಲ ರವರನ್ನು ಪಿ.ಡಬ್ಲ್ಯೂ.2 ಎಂದು ಸಾಕ್ಷ್ಯ ಮಾಡಿಸಿದ್ದು, ನಿ.ಪಿ.5ನ್ನು ಗುರುತುಪಡಿಸಿಕೊಂಡಿರುತ್ತಾರೆ. ಶ್ರೀ. ಕೆ.ಬಿ ಪ್ರಭುಸ್ವಾಮಿ ರವರನ್ನು ಪಿ.ಡಬ್ಲ್ಯೂ.3 ಎಂದು ಸಾಕ್ಷ್ಯ ಮಾಡಿಸಿದ್ದು, ನಿ.ಪಿ.6 ಮತ್ತು ನಿ.ಪಿ.7ನ್ನು ಗುರುತುಪಡಿಸಿಕೊಂಡಿರುತ್ತಾರೆ ಮತ್ತು ಶ್ರೀ. ಶಿವಶಂಕರ ರವರನ್ನು ಪಿ.ಡಬ್ಲ್ಯೂ.4 ಎಂದು ಸಾಕ್ಷ್ಯ ಮಾಡಿಸಿದ್ದು, ನಿ.ಪಿ.8ನ್ನು ಗುರುತುಪಡಿಸಿಕೊಂಡಿರುತ್ತಾರೆ. ಆ.ಸ.ನೌರವರು ತಮ್ಮ ಸಾಕ್ಷ್ಯವನ್ನು ಮಾಡಿಸಿರುವುದಿಲ್ಲ.

8. ಉಭಯ ಪಕ್ಷದವರ ಪರವಾಗಿ ವಾದ ವಿವಾದವನ್ನು ಪರಿಶೀಲಿಸಲಾಯಿತು. ಆ.ಸ.ನೌ ರವರು ತಮ್ಮ ಲಿಖಿತ ವಾದವನ್ನು ಮಂಡಿಸಿರುತ್ತಾರೆ.

9. ಈ ಕೆಳಕಂಡ ಅಂಶಗಳು ನನ್ನ ನಿರ್ಣಯಕ್ಕೆ ಉದ್ಭವಿಸಿರುತ್ತವೆ.

**ಅಂಶ–1:** ವಿಚಾರಣಾ ಪ್ರಾಧಿಕಾರವು ಆ.ಸ.ನೌರವರ ಮೇಲೆ ಆಪಾದಿಸಲಾದ ಆರೋಪಗಳನ್ನು ರುಜುವಾತುಪಡಿಸಿದೆಯೇ?

**ಅಂಶ–2:** ಆದೇಶವೇನು?

10. ಕಡತವನ್ನು ಪರಿಶೀಲಿಸಲಾಯಿತು ಮತ್ತು ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

11. ಮೇಲ್ಕಂಡ ಪ್ರಶ್ನೆಗಳಿಗೆ ಕೆಳಗೆ ಚರ್ಚಿಸಿರುವ ಕಾರಣಗಳಿಂದ ಉತ್ತರವು ಈ ಕೆಳಕಂಡಂತಿವೆ.

**ಅಂಶ 1: ಸಕಾರಾತ್ಮಕವಾಗಿ.**

**ಅಂಶ 2: ಅಂತಿಮ ಆದೇಶದಂತೆ.**

## ಕಾರಣಗಳು

12. ದೂರುದಾರರಾದ **ಶ್ರೀಮತಿ. ಶಾಂತ** ಬಿನ್ ಚಿಕ್ಕೂಸು, ಕಲಿಯೂರು ಗ್ರಾಮ, ಟಿ. ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ ಇವರು ತಮ್ಮ ದೂರಿನಲ್ಲಿ ಆ.ಸ.ನೌ ರವರು ಕಲಿಯೂರು ಗ್ರಾಮ ಪಂಚಾಯಿತಿಯ ಪಿ.ಡಿ.ಓ ರವರು ತಮ್ಮ ವ್ಯಾಪ್ತಿಯಲ್ಲಿರುವ

    1) ಕುಂತೂರು ಸಕ್ಕರೆ ಕಾರ್ಖಾನೆಗೆ ಪಂಚಾಯಿತಿ ನಡುವಳಿಯಿಲ್ಲದೇ ಕಾವೇರಿ ನೀರು ಸರಬರಾಜಿಗೆ ನಿರಾಪೇಕ್ಷಣಾ ಪತ್ರವನ್ನು ರೂ.5 ಲಕ್ಷ ಪಡೆದು ಕೊಟ್ಟಿರುತ್ತಾರೆ.
    2) ನೀರು ಸರಬರಾಜಿಗೆ ಬಿಲ್ ಇಲ್ಲದೇ ರೂ.6 ಲಕ್ಷ ಹಣ ಬ್ಯಾಂಕಿನಿಂದ ಪಡೆದಿರುತ್ತಾರೆ.
    3) ವಸತಿ ಉಳ್ಳವರಿಗೆ ಮನೆಗಳನ್ನು ಕೊಟ್ಟಿರುತ್ತಾರೆ.
    4) ಕೆಲವು ಫಲಾನುಭವಿಗಳಿಗೆ ವಿತರಿಸಿದ ಚೆಕ್ಕುಗಳು ಅಮಾನ್ಯಗೊಂಡಿರುತ್ತದೆ.
    5) ಶೌಚಾಲಯಗಳನ್ನು ನಿರ್ಮಿಸಲು ಫಲಾನುಭವಿಗಳ ಸಹಿ ಮಾಡಿದ ಬ್ಯಾಂಕಿನಿಂದ ಹಣ ಡ್ರಾ ಮಾಡಿ ಅವರ ಕೈಗೆ ಕೊಡಲಾಗಿದೆ ಹಾಗೂ ಎದುರುದಾರರು ಈ ಹಿಂದೆಯೂ ಇದೇ ರೀತಿಯಾಗಿ ಅವ್ಯವಹಾರ ಮಾಡಿ 3 ಬಾರಿ ಅಮಾನತ್ತುಗೊಂಡಿರುತ್ತಾರೆ ಅಂತಾ ಸಲ್ಲಿಸಿರುತ್ತಾರೆ.

ಆದ್ದರಿಂದ ಆ.ಸ.ನೌ ರವರ ವಿರುದ್ಧ ಕ್ರಮ ತೆಗೆದುಕೊಳ್ಳಲು ತಿಳಿಸಿರುತ್ತಾರೆ.

13. ಶಿಸ್ತು ಪ್ರಾಧಿಕಾರ ದೂರುದಾರರನ್ನು ಪಿ.ಡಬ್ಲ್ಯೂ.1 ಎಂದು ನುಡಿಸಾಕ್ಷಿ ಮಾಡಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ನಿ.ಪಿ.1 ರಿಂದ 4 ರವರೆಗಿನ ದಾಖಲಾತಿಗಳನ್ನು ಗುರುತಿಸಿಕೊಂಡಿರುತ್ತಾರೆ. ನಿ.ಪಿ.1 ಇದು ದೂರು; ನಿ.ಪಿ.2 ಇದು ಫಾರಂ ನಂ.1 ಮತ್ತು ನಿ.ಪಿ.3 ಇದು ಫಾರಂ ನಂ.2; ನಿ.ಪಿ.4 ದೂರಿಗೆ ಸಂಬಂಧಪಟ್ಟ ದಾಖಲಾತಿಗಳನ್ನು ಗುರುತಿಸಿಕೊಂಡಿರುತ್ತಾರೆ. ಈ ವಿಚಾರಣೆಗೆ ಸಂಬಂಧಪಟ್ಟಂತೆ ಆ.ಸ.ನೌ ರವರು ಸಕ್ಕರೆ ಕಾರ್ಖಾನೆ, ಬಣ್ಣಾರಿ ಅಮ್ಮನ್, ಕುಂತೂರು, ಕೊಳ್ಳೇಗಾಲ ತಾಲ್ಲೂಕಿಗೆ ಪಂಚಾಯಿತಿಯಿಂದ ಅನುಮೋದನೆಯನ್ನು ಪಡೆಯದೇ, ತಡೆಮಾಲಂಗಿ ಗ್ರಾಮದಲ್ಲಿ ಹರಿಯುವ ಕಾವೇರಿ ನದಿಯಿಂದ ವಿದ್ಯುತ್ ಸರಬರಾಜನ್ನು ಪಡೆಯಲು ಪರವಾನಿಗೆ

ನೀಡಿದ್ದರು ಎನ್ನುವ ವಿಷಯದ ಬಗ್ಗೆ ಮಾತ್ರ ದೋಷಾರೋಪಣೆ ಇರುತ್ತದೆ. ಇದಕ್ಕೆ ಸಂಬಂಧಪಟ್ಟಂತೆ ದೂರುದಾರರು ನಿ.ಪಿ.4ರಲ್ಲಿ ನಿರಾಕ್ಷೇಪಣಾ ಪತ್ರ (ಎನ್.ಒ.ಸಿ) ಇದರ ನಕಲು ಪ್ರತಿಯನ್ನು ಸಲ್ಲಿಸಿರುತ್ತಾರೆ. ಸದರಿ ದಾಖಲಾತಿಯ ಪ್ರಕಾರ ಆ.ಸ.ನೌ ಮತ್ತು ಪಂಚಾಯಿತಿ ಅಧ್ಯಕ್ಷರು ದಿನಾಂಕ: 07/09/2013 ರಂದು ಸದರಿ ನಿರಾಕ್ಷೇಪಣಾ ಪತ್ರ (ಎನ್.ಒ.ಸಿ) ನೀಡಿದ್ದು, ಅದರಲ್ಲಿ ಮೈಸೂರು ಜಿಲ್ಲೆ ಟಿ. ನರಸೀಪುರ ತಾಲ್ಲೂಕು, ಕಲಿಯೂರು ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಸೇರಿದ ಮಾಲಂಗಿ ಗ್ರಾಮದ ಸರ್ವೆ ನಂ.296/3, 4, 5 ಮತ್ತು 6ರಲ್ಲಿ ನಿರ್ಮಾಣ ಮಾಡಲಿರುವ ಪಂಪ್ ಹೌಸ್‌ಗೆ ಅಂದರೆ ಕಾವೇರಿ ನದಿಯಿಂದ ಪೈಪಿನ ಮುಖಾಂತರ ಪಂಪ್ ಮಾಡಿ ಕುಂತೂರಿನಲ್ಲಿರುವ ಬಣ್ಣಾರಿ ಅಮ್ಮನ್ ಸಕ್ಕರೆ ಕಾರ್ಖಾನೆಯ ಉಪಯೋಗಕ್ಕೆ ನೀರು ಸರಬರಾಜು ಮಾಡಲು ವಿದ್ಯುಚ್ಛಕ್ತಿ ಅವಶ್ಯಕತೆ ಇರುವುದರಿಂದ ಅದಕ್ಕೆ ವಿದ್ಯುಚ್ಛಕ್ತಿ ಸರಬರಾಜು ಮಾಡಲು ತಮ್ಮ ಪಂಚಾಯಿತಿ ವತಿಯಿಂದ ಯಾವುದೇ ವಿಧವಾದ ಆಕ್ಷೇಪಣೆ ಇರುವುದಿಲ್ಲ ಎಂದು ಈ ಮೂಲಕ ದೃಢೀಕರಿಸಿದೆ ಅಂತಾ ನಮೂದು ಇರುತ್ತದೆ. ಶಿಸ್ತು ಪ್ರಾಧಿಕಾರದ ಪ್ರಕಾರ ಈ ಎನ್.ಒ.ಸಿಯನ್ನು ನೀಡುವ ಮೊದಲು ಪಂಚಾಯಿತಿಯ ಅನುಮೋದನೆಯನ್ನು ಪಡೆಯದೇ ನೀಡಿದ್ದು ಇರುತ್ತದೆ ಅಂತಾ ವಾದ ಇರುತ್ತದೆ. ಪಿ.ಡಬ್ಲ್ಯೂ.1 ರವರ ಪಾಟಿಸವಾಲಿನಲ್ಲಿ ಎನ್.ಒ.ಸಿಯನ್ನು ಸಕ್ಕರೆ ಕಾರ್ಖಾನೆಯವರು ಕೇಳಿದ ನಂತರವೇ ಆ.ಸ.ನೌ ರವರು ಕೊಟ್ಟಿರುತ್ತಾರೆ ಅಂತಾ ಸಲಹೆ ಮಾಡಿರುತ್ತಾರೆ. ಆದರೆ ತಾಲ್ಲೂಕು ಪಂಚಾಯಿತಿಯಿಂದ ಪರವಾನಿಗೆಯನ್ನು ಪಡೆದುಕೊಂಡಿರುತ್ತಾರೋ ಅಥವಾ ಇಲ್ಲವೋ ಎಂಬುದರ ಬಗ್ಗೆ ಪಾಟಿಸವಾಲು ಮಾಡಿರುವುದಿಲ್ಲ ಮತ್ತು ಇದಕ್ಕೆ ಸಂಬಂಧಪಟ್ಟಂತೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ.

14. ಈ ವಿಚಾರಣೆಯಲ್ಲಿ ದೂರುದಾರರು ದೂರನ್ನು ಸಲ್ಲಿಸಿದ ನಂತರ ದೂರಿನ ಬಗ್ಗೆ ವರದಿ ಸಲ್ಲಿಸುವಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಮೈಸೂರು ಇವರನ್ನು ತನಿಖಾಧಿಕಾರಿಗಳಾಗಿ ನೇಮಿಸಿ, ವರದಿ ಸಲ್ಲಿಸುವಂತೆ ನಿರ್ದೇಶಿಸಿದ್ದು ಇರುತ್ತದೆ. ಶಿಸ್ತು ಪ್ರಾಧಿಕಾರವು ಶ್ರೀ. ಪಿ.ಎ ಗೋಪಾಲ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಮೈಸೂರು ಇವರನ್ನು ಪಿ.ಡಬ್ಲ್ಯೂ.2 ಎಂದು ನುಡಿಸಾಕ್ಷಿ ಮಾಡಿಸಿರುತ್ತಾರೆ. ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಕಲಿಯೂರು ಗ್ರಾಮ ಪಂಚಾಯಿತಿ, ಟಿ. ನರಸೀಪುರ

ತಾಲ್ಲೂಕಿಗೆ ಸೇರಿದ್ದು, ಇವರ ವ್ಯಾಪ್ತಿಗೆ ಒಳಪಟ್ಟಿರುತ್ತದೆ ಅಂತಾ ನುಡಿದಿರುತ್ತಾರೆ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ದಿನಾಂಕ: 06/08/2014 ರಲ್ಲಿ ಗೌರವಾನ್ವಿತ ಉಪಲೋಕಾಯುಕ್ತರು ಪ್ರಸ್ತುತ ದೂರಿನ ಬಗ್ಗೆ ವಿಚಾರಣೆ ನಡೆಸಿ, ವರದಿಯನ್ನು ಸಲ್ಲಿಸುವಂತೆ ಆದೇಶಿಸಿರುತ್ತಾರೆ. ಆ ಪ್ರಕಾರ ತಾನು ತಮ್ಮ ಜಿಲ್ಲಾ ಪಂಚಾಯಿತಿಯಲ್ಲಿ ಮುಖ್ಯ ಯೋಜನಾಧಿಕಾರಿಗಳಾಗಿದ್ದ ಶ್ರೀ. ಪ್ರಭುಸ್ವಾಮಿ ರವರಿಗೆ ಆದೇಶವನ್ನು ನೀಡಿ ವಿಚಾರಣೆ ನಡೆಸಿ, ವರದಿಯನ್ನು ಸಲ್ಲಿಸುವಂತೆ ತಿಳಿಸಿದ್ದೆ ಅಂತಾ ನುಡಿದಿರುತ್ತಾರೆ. ನಂತರ ಸದರಿಯವರು ವರದಿಯನ್ನು ಸಲ್ಲಿಸಿದ್ದು, ಅದನ್ನು ಈ ಸಂಸ್ಥೆಗೆ ದಿನಾಂಕ: 13/11/2014 ರಂದು ಸಲ್ಲಿಸಿರುತ್ತೇನೆ ಅಂತಾ ನುಡಿದಿರುತ್ತಾರೆ. ಸಂಸ್ಥೆಗೆ ಸಲ್ಲಿಸಿದ ಪತ್ರವನ್ನು ನಿ.ಪಿ.5 ಎಂದು ಗುರುತಿಸಲಾಗಿರುತ್ತದೆ. ಆ.ಸ.ನೌ ರವರು ಇವರನ್ನು ಪಾಟಿಸವಾಲು ಮಾಡಿರುವುದಿಲ್ಲ.

15. ಶಿಸ್ತು ಪ್ರಾಧಿಕಾರವು ಶ್ರೀ. ಕೆ.ಬಿ ಪ್ರಭುಸ್ವಾಮಿ ರವರನ್ನು ಪಿ.ಡಬ್ಲ್ಯೂ.3 ಎಂದು ನುಡಿಸಾಕ್ಷಿ ಮಾಡಿಸಿರುತ್ತಾರೆ. ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ದಿನಾಂಕ: 21/08/2014 ರಂದು ಟಿಪ್ಪಣಿಯನ್ನು ನೀಡಿದ್ದು, ತನಗೆ ಕಲಿಯೂರು ಗ್ರಾಮ ಪಂಚಾಯತಿ, ಟಿ. ನರಸೀಪುರ ತಾಲ್ಲೂಕು, ಬಣ್ಣಾರಿಯಮ್ಮ ಸಕ್ಕರೆ ಕಾರ್ಖಾನೆ ಇವರಿಗೆ ಎನ್.ಒ.ಸಿ ನೀಡಿದ ಬಗ್ಗೆ ಪರಿಶೀಲಿಸಿ, ವರದಿಯನ್ನು ಸಲ್ಲಿಸುವಂತೆ ತಿಳಿಸಿರುತ್ತಾರೆ. ಅದರಂತೆ ತಾನು ದಿನಾಂಕ: 21/10/2014 ರಂದು ಗ್ರಾಮ ಪಂಚಾಯಿತಿಗೆ ಭೇಟಿ ನೀಡಿ ಪರಿಶೀಲಿಸಿದಾಗ, ದಿನಾಂಕ: 03/08/2013 ರಂದು ಬಣ್ಣಾರಿಯಮ್ಮ ಸಕ್ಕರೆ ಕಾರ್ಖಾನೆ ಉಪಾಧ್ಯಕ್ಷರು, ಕಲಿಯೂರು ಗ್ರಾಮ ಪಂಚಾಯಿತಿಗೆ ಎನ್.ಒ.ಸಿ ಗಾಗಿ ಅರ್ಜಿ ಸಲ್ಲಿಸಿರುತ್ತಾರೆ. ದಿನಾಂಕ: 07/09/2013 ರಂದು ಆ.ಸ.ನೌ ರವರು ಮತ್ತು ಅಧ್ಯಕ್ಷರಾದ ಶ್ರೀಮತಿ. ಹೊನ್ನಮ್ಮ ಇವರುಗಳು ಎನ್.ಒ.ಸಿಯನ್ನು ನೀಡಿರುತ್ತಾರೆ. ಎನ್.ಒ.ಸಿ ಬಗ್ಗೆ ಪರಿಶೀಲನೆ ಮಾಡಿದಾಗ, ಪಂಚಾಯತ್ ರಾಜ್ ಕಾಯ್ದೆಯನ್ನು ಉಲ್ಲಂಘನೆ ಮಾಡಿ ಎನ್.ಒ.ಸಿ ನೀಡಿರುವುದು ಕಂಡುಬರುತ್ತದೆ. ನಂತರ ಇವರು ಪಿ.ಡಬ್ಲ್ಯೂ.2 ಇವರಿಗೆ ತಮ್ಮ ವರದಿಯನ್ನು ಸಲ್ಲಿಸಿರುತ್ತೇನೆ ಅಂತಾ ನುಡಿದಿರುತ್ತಾರೆ. ಸದರಿ ಪರಿಶೀಲನಾ ವರದಿಯನ್ನು ನಿ.ಪಿ.6 ಮತ್ತು ನಿರಾಕ್ಷೇಪಣಾ ಪತ್ರ (ಎನ್.ಒ.ಸಿ) ಯನ್ನು ನಿ.ಪಿ.7 ಅಂತಾ ಗುರುತಿಸಿಕೊಂಡಿರುತ್ತಾರೆ. ತಮ್ಮ ಪರಿಶೀಲನಾ ವರದಿಯಲ್ಲಿ "ಕರ್ನಾಟಕ

ಸರ್ಕಾರದ ಪತ್ರ ಸಂಖ್ಯೆ: ಜಸಂ 8 ಎಂಎಂಕೆ 2012, ದಿನಾಂಕ: 28/05/2013ರ ಆದೇಶದಲ್ಲಿ ಬಣ್ಣಾರಿ ಅಮ್ಮನ್ ಸಕ್ಕರೆ ಕಾರ್ಖಾನೆಗೆ ನೀರಿನ ಸಂಪರ್ಕ ಕಲ್ಪಿಸಲು ಮತ್ತು ವಿದ್ಯುತ್ ಸಂಪರ್ಕ ಕಲ್ಪಿಸಲು ಸರ್ಕಾರದಿಂದ ಅನುಮತಿ ನೀಡಲಾಗಿದೆ. ಸದರಿ ಸರ್ಕಾರದ ಆದೇಶದಲ್ಲಿ ಕೆಲವು ಷರತ್ತುಗಳನ್ನು ವಿಧಿಸಿದ್ದು, ಕ್ರ.ಸಂ.11ರಲ್ಲಿ ಎಲ್ಲಾ ಇಲಾಖೆ ಮತ್ತು ಸಂಸ್ಥೆಗಳಿಂದ ಅನುಮತಿಯನ್ನು ಪಡೆದುಕೊಳ್ಳತಕ್ಕದು ಎಂದು ತಿಳಿಸಿದೆ". ಮುಂದುವರದು, "ಸರ್ಕಾರದ ಷರತ್ತಿನಂತರ ನಿರಾಕ್ಷೇಪಣಾ ಪತ್ರ (ಎನ್.ಒ.ಸಿ) ಅನ್ನು ಗ್ರಾಮ ಪಂಚಾಯಿತಿ ಕಡೆಯಿಂದ ಪಡೆಯಬೇಕಾಗಿರುತ್ತದೆ. ಆ.ಸ.ನೌ ರವರು ಸಾಮಾನ್ಯ ಸಭೆಗೆ ಮಂಡಿಸದೆ ಮತ್ತು ನಿರಾಕ್ಷೇಪಣಾ ಪತ್ರ (ಎನ್.ಒ.ಸಿ) ವನ್ನು ನೀಡುವ ಮುನ್ನ ಸದರಿ ವಿಷಯವನ್ನು ಗ್ರಾಮ ಪಂಚಾಯಿತಿ ಸಾಮಾನ್ಯ ಸಭೆಗೆ ಮಂಡಿಸದೆ, ಗ್ರಾಮ ಪಂಚಾಯತಿ ಅನುಮೋದನೆ ಪಡೆಯದೇ ನಿರಾಕ್ಷೇಪಣಾ ಪತ್ರ (ಎನ್.ಒ.ಸಿ) ನೀಡಿದ್ದು ಇರುತ್ತದೆ" ಅಂತಾ ನುಡಿದಿರುತ್ತಾರೆ. ಇವರ ಪಾಟಿಸವಾಲಿನಲ್ಲಿ ಆ.ಸ.ನೌ ರವರು ಅಧ್ಯಕ್ಷರ ಅಪ್ಪಣೆ ಮೇರೆಗೆ ನಿರಾಕ್ಷೇಪಣಾ ಪತ್ರ (ಎನ್.ಒ.ಸಿ) ನೀಡಿರುತ್ತಾರೆ ಅಂತಾ ಸಲಹೆ ಮಾಡಿರುತ್ತಾರೆ. ಆದರೆ ಗ್ರಾಮ ಪಂಚಾಯಿತಿಯಿಂದ ಅನುಮೋದನೆ ಪಡೆದ ಬಗ್ಗೆ ಮತ್ತು ಸಾಮಾನ್ಯ ಸಭೆಯಲ್ಲಿ ಮಂಡಿಸಿದ ಬಗ್ಗೆ ಯಾವುದೇ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ.

16. ಶ್ರೀ. ಶಿವಶಂಕರ, ಸಿ.ಇ.ಓ, ಚಿಕ್ಕಬಳ್ಳಾಪುರ ಇವರನ್ನು ಪಿ.ಡಬ್ಲ್ಯೂ.4 ಎಂದು ನುಡಿಸಾಕ್ಷಿ ಮಾಡಿಸಿರುತ್ತಾರೆ. ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಇವರಿಗಿಂತ ಮೊದಲು ಶ್ರೀ. ಗೋಪಾಲ್ ಪಿ ರವರು ಸಿ.ಇ.ಓ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಆ ಸಮಯದಲ್ಲಿ ಶ್ರೀ. ಪ್ರಭುಸ್ವಾಮಿ ರವರು ಸಹ ಮುಖ್ಯ ಯೋಜನಾಧಿಕಾರಿಗಳಾಗಿ, ಜಿಲ್ಲಾ ಪಂಚಾಯತ್, ಮೈಸೂರು ನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು ಅಂತಾ ನುಡಿದಿರುತ್ತಾರೆ. ದಿನಾಂಕ: 22/02/2017ರಲ್ಲಿ ಈ ಸಂಸ್ಥೆಯಿಂದ ಉಪಲೋಕ್/ಎಂವೈಎಸ್/2902/2014ರಲ್ಲಿ ವರದಿ ಸಲ್ಲಿಸುವಂತೆ ಆದೇಶಿಸಿದ್ದು, ಆ ಪ್ರಕಾರ ಈ ವಿಚಾರಣೆಗೆ ಸಂಬಂಧಪಟ್ಟಂತೆ ಶ್ರೀ. ಪ್ರಭುಸ್ವಾಮಿ ರವರನ್ನು ನಿಯೋಜಿಸಿ ವರದಿಯನ್ನು ಸಲ್ಲಿಸಲು ಹೇಳಿದ್ದು, ಆ ಪ್ರಕಾರ ಅವರು ನಿ.ಪಿ.6 ರಂತೆ ವರದಿಯನ್ನು ಸಲ್ಲಿಸಿದ್ದು, ತಾನು ನಿ.ಪಿ.8ರಂತೆ ವರದಿಯನ್ನು ಸಲ್ಲಿಸಿರುತ್ತೇನೆ ಅಂತಾ ನುಡಿದಿರುತ್ತಾರೆ.

17. ಈ ಮೇಲಿನ ಎಲ್ಲಾ ಸಾಕ್ಷಿಗಳನ್ನು ಮತ್ತು ಸಲ್ಲಿಸಿದ ದಾಖಲಾತಿಗಳನ್ನು ಪರಿಶೀಲಿಸಿದಾಗ, ಆ.ಸ.ನೌ ರವರು ನಿರಾಕ್ಷೇಪಣಾ ಪತ್ರ(ಎನ್.ಒ.ಸಿ)ವನ್ನು ನೀಡುವ ಮೊದಲು ಗ್ರಾಮ ಪಂಚಾಯಿತಿ ಸಭೆಯಲ್ಲಿ ಮಂಡಿಸದೇ ಮತ್ತು ಯಾವುದೇ ಪಂಚಾಯಿತಿಯಿಂದ ಅನುಮೋದನೆ ಪಡೆಯದೆ ಸಕ್ಕರೆ ಕಾರ್ಖಾನೆಗೆ ವಿದ್ಯುಚ್ಛಕ್ತಿ ಸಂಪರ್ಕಕ್ಕೆ ನಿರಾಕ್ಷೇಪಣಾ ಪತ್ರ (ಎನ್.ಒ.ಸಿ)ವನ್ನು ನೀಡಿದ್ದು ಕಂಡುಬರುತ್ತದೆ. ಇದರಿಂದ, ಅವರು ಕರ್ತವ್ಯ ಲೋಪ ಎಸಗಿರುತ್ತಾರೆ ಅಂತಾ ಶಿಸ್ತು ಪ್ರಾಧಿಕಾರವು ರುಜುವಾತುಪಡಿಸಿರುತ್ತದೆ.

18. ಆ.ಸ.ನೌ ಪರ ವಕೀಲರು ವಾದ ಮಂಡನೆಯ ವೇಳೆಯಲ್ಲಿ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿ, ನಂಜನಗೂಡು ಇವರು ನೀಡಿದ ಅಧಿಕೃತ ಜ್ಞಾಪನ ಪತ್ರ ಮತ್ತು ಉಪ ಕಾರ್ಯದರ್ಶಿ (ಅಭಿವೃದ್ಧಿ) ಹಾಗೂ ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳ ಶಿಸ್ತು ಪ್ರಾಧಿಕಾರ, ಜಿಲ್ಲಾ ಪಂಚಾಯತಿ, ಮೈಸೂರು ಇವರ ನಡುವಳಿಗಳ ನಕಲು ಪ್ರತಿಯನ್ನು ಸಲ್ಲಿಸಿರುತ್ತಾರೆ. ಉಪ ಕಾರ್ಯದರ್ಶಿ (ಅಭಿವೃದ್ಧಿ), ಜಿಲ್ಲಾ ಪಂಚಾಯತಿ, ಮೈಸೂರು ಇವರ ನಡುವಳಿ ದಿನಾಂಕ: 30/10/2018ರ ಆದೇಶದಲ್ಲಿ "ಶ್ರೀ. ಎಸ್. ರಾಜಕುಮಾರ್, ಗ್ರಾಮ ಪಂಚಾಯತ್ ಕಾರ್ಯದರ್ಶಿ ಗ್ರೇಡ್-2, ಕುರಿಹುಂಡಿ ಗ್ರಾಮ ಪಂಚಾಯತ್, ನಂಜನಗೂಡು ತಾಲ್ಲೂಕು ರವರು ಟಿ. ನರಸೀಪುರ ತಾಲ್ಲೂಕು, ಕಲಿಯೂರು ಗ್ರಾಮ ಪಂಚಾಯಿತಿಯಲ್ಲಿ ಪ್ರಭಾರ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಎಸಗಿರುವ ಹಣ ದುರುಪಯೋಗ ಹಾಗೂ ಕರ್ತವ್ಯ ಲೋಪದ ಆಪಾದನೆಗೆ ಸಂಬಂಧಿಸಿದಂತೆ ನೌಕರರಿಗೆ ದೋಷಾರೋಪಣಾ ಪಟ್ಟಿಯನ್ನು ಜಾರಿ ಮಾಡಲಾಗಿದ್ದು, ನೌಕರರ ವಿರುದ್ಧದ ಆರೋಪಗಳಿಗೆ ಸಂಬಂಧಿಸಿಂತೆ ಸಿ.ಸಿ.ಎ ನಿಯಮ 11ರ ಅಡಿಯಲ್ಲಿ ವಿಚಾರಣೆಯನ್ನು ನಡೆಸಿ, ವಿಚಾರಣಾ ವರದಿಯನ್ನು ಸಲ್ಲಿಸುವಂತೆ ಶ್ರೀ. ಎನ್. ನಾರಾಯಣ, ನಿವೃತ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು ರವರನ್ನು ವಿಚಾರಣಾಧಿಕಾರಿಯಾಗಿ ನೇಮಕ ಮಾಡಲಾಗಿರುತ್ತದೆ. ಅದರಂತೆ, ವಿಚಾರಣಾಧಿಕಾರಿಗಳು ವಿಚಾರಣೆ ನಡೆಸಿ, ವಿಚಾರಣಾ ವರದಿಯನ್ನು ಸಲ್ಲಿಸಿರುತ್ತಾರೆ". ಮುಂದುವರೆದು, ಇವರ ವರದಿಯಲ್ಲಿ ಆ.ಸ.ನೌ ರವರು ಪಿ.ಡಿ.ಓ, ಕಲಿಯೂರು ಗ್ರಾಮ ಪಂಚಾಯಿತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಒಟ್ಟು 7 ಆರೋಪಗಳು

ಸಾಬೀತಾಗಿರುವುದೆಂದು ಸಲ್ಲಿಸಿರುವ ವಿಚಾರಣಾಧಿಕಾರಿಗಳ ವರದಿ ಅಡ್‌ಹಾಕ್ ಸಮಿತಿಯವರು ನಿರ್ಣಯದಂತೆ ರೂ.4,73,518/-ಗಳನ್ನು ವಸೂಲಾಗಬೇಕಾಗಿರುವುದೆಂದು, ರೂ.5,63,541/-ಗಳಿಗೆ ಯಾವುದೇ ದಾಖಲೆಗಳನ್ನು ಸಲ್ಲಿಸದೇ ಇರುವುದರಿಂದ ಮೊಬಲಗನ್ನು ಆಕ್ಷೇಪಣೆಯಲ್ಲಿ ಇಡಲಾಗಿದೆ ಎಂಬುವುದನ್ನು ಸರ್ಕಾರದ ನಷ್ಟ ಎಂದು ಪರಿಗಣಿಸಲಾಗಿದೆ. ಆದ್ದರಿಂದ ಸದರಿ ಹಣವನ್ನು ಆ.ಸ.ನೌ ರವರ ನಿವೃತ್ತಿ ಸೌಲಭ್ಯಗಳಿಂದ ವಸೂಲು ಮಾಡಲು ಆದೇಶಿಸಿದೆ. ಆ.ಸ.ನೌ ರವರ ಅಮಾನತ್ತು ಅವಧಿಯನ್ನು 'ಅಮಾನತ್ತು ಅವಧಿ' ಎಂದು ಪರಿಗಣಿಸಿ ಆದೇಶಿಸಿದೆ. ಸದರಿ ಆದೇಶವು ಮಾನ್ಯ ಲೋಕಾಯುಕ್ತರವರಲ್ಲಿ ಬಾಕಿ ಇರುವ ಪ್ರಕರಣದ ಅಂತಿಮ ಆದೇಶಕ್ಕೆ ಒಳಪಟ್ಟಿರುತ್ತದೆ ಅಂತಾ ನಮೂದು ಇರುತ್ತದೆ. ಸದರಿ ನಡುವಳಿಕೆಯ ಮೇಲೆ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿ, ನಂಜನಗೂಡು ಇವರು ಆ.ಸ.ನೌ ರವರನ್ನು ದಿನಾಂಕ: 02/11/2018 ರಿಂದ ಜಾರಿಗೆ ಬರುವಂತೆ **'ಕಡ್ಡಾಯ ನಿವೃತ್ತಿಗೊಳಿಸಲಾಗಿದೆ'** ಅಂತಾ ಆದೇಶಿಸಿದ್ದು ಇರುತ್ತದೆ.

19. ಆ.ಸ.ನೌ ಪರ ವಕೀಲು ಮೇಲೆ ಹೇಳಿದ ಆದೇಶಗಳ ಬಗ್ಗ ನಕಲು ಪ್ರತಿಗಳನ್ನು ಸಲ್ಲಿಸಿರುತ್ತಾರೆ. ಆದ್ದರಿಂದ, ಸದರಿ ಆದೇಶದ ದೃಢೀಕೃತ ನಕಲುಗಳನ್ನು ಸಲ್ಲಿಸುವಂತೆ ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತ್, ನಂಜನಗೂಡು ಹಾಗೂ ಉಪ ಕಾರ್ಯದರ್ಶಿ (ಅಭಿವೃದ್ಧಿ) ಹಾಗೂ ಗ್ರಾಮ ಪಂಚಾಯಿತಿಯ ಕಾರ್ಯದರ್ಶಿಗಳ ಶಿಸ್ತು ಪ್ರಾಧಿಕಾರ, ಜಿಲ್ಲಾ ಪಂಚಾಯತ್, ಮೈಸೂರು ಇವರಿಗೆ ಸಲ್ಲಿಸಲು ಹಾಗೂ ಒಂದು ವೇಳೆ ಆ.ಸ.ನೌ ರವರು ಇವರುಗಳು ಮಾಡಿದ ಆದೇಶದ ವಿರುದ್ಧ ಮೇಲ್ಮನವಿ ಏನಾದರೂ ಸಲ್ಲಿಸಿದ್ದರೆ ಅದರ ಬಗ್ಗೆ ಮಾಹಿತಿ ನೀಡಲು ಸೂಚಿಸಲಾಗಿರುತ್ತರೆ. ಆ ಪ್ರಕಾರ ಅವರು ಇ-ಮೇಲ್ ಮುಖಾಂತರ ಮೇಲೆ ಹೇಳಿದ ಪ್ರತಿಗಳನ್ನು ಸಲ್ಲಿಸಿರುತ್ತಾರೆ. ಉಪ ಕಾರ್ಯದರ್ಶಿ (ಅಭಿವೃದ್ಧಿ) ಹಾಗೂ ಗ್ರಾಮ ಪಂಚಾಯಿತಿಯ ಕಾರ್ಯದರ್ಶಿಗಳ ಶಿಸ್ತು ಪ್ರಾಧಿಕಾರ, ಜಿಲ್ಲಾ ಪಂಚಾಯತ್. ಮೈಸೂರು ಇವರು, ಇವರು ಮಾಡಿದ ಆದೇಶದ ವಿರುದ್ಧ ಆ.ಸ.ನೌ ರವರು ಕೆ.ಎಸ್.ಎ.ಟಿ, ಬೆಂಗಳೂರು ರಲ್ಲಿ ಅಪ್ಲಿಕೇಷನ್ ನಂ.2295/2020 ಅನ್ನು ಸಲ್ಲಿಸಿದ್ದು, ಸದರಿಯವರು (1) The State of Karnataka, Rep. By its Principal Secretary, RDPR, Bengaluru (2) The Chief Executive

Officer, Zilla Panchayath, Mysore and (3) The Deputy Secretary (Development) & Disciplinary Authority for Grama Panchayath Secretaries, Special Land Acquisition Officer, Zilla Panchayath, Mysore ರವರ ವಿರುದ್ದ ಸಲ್ಲಿಸಿದ್ದು, ಅದರಲ್ಲಿ ದಿನಾಂಕ: 22/07/2020 ರಂದು ಮಧ್ಯಂತರ ಆದೇಶ ಆಗಿ ಮೇಲಿನ ಆದೇಶ ನಂ.ಸಿಸಿಎ/36/2014-15/1409 ದಿನಾಂಕ: 30/10/2018 passed by 3rd Respondent and ನಂ.ಸಿಸಿಎ/36/2014-15/ಮೇಲ್ಮನವಿ ನಂ.1409 ದಿನಾಂಕ: 12/07/2019 passed by 2nd Respondent are stayed till next date. ಸದರಿ ಮೇಲ್ಮನವಿಯು ಇನ್ನು ಚಾಲ್ತಿಯಲ್ಲಿರುತ್ತದೆ ಅಂತಾ ತಿಳಿಸಿರುತ್ತಾರೆ. ಈಗಲೂ ಸಹ ಆನ್‌ಲೈನ್‌ನಲ್ಲಿ ಸದರಿ ಪ್ರಕರಣ ಯಾವ ಹಂತದಲ್ಲಿರುತ್ತದೆ ಅಂತಾ ನೋಡಲಾಗಿ, ಇನ್ನು ಅದು ಚಾಲ್ತಿಯಲ್ಲಿರುತ್ತದೆ ಅಂತಾ ಕಂಡುಬರುತ್ತದೆ.

20. **ಆದ್ದರಿಂದ, ಆ.ಸ.ನೌ ರವರು ಮೇಲ್ಮನವಿಯನ್ನು ಸಲ್ಲಿಸಿದ್ದರಿಂದ ಹಾಗೂ ಸದರಿ ಮೇಲ್ಮನವಿಯಲ್ಲಿ ಆ ಮೇಲ್ಮನವಿಯಲ್ಲಿದ್ದ ಎದುರುದಾರ ನಂ.2 ಮತ್ತು 3 ಇವರು ಮಾಡಿದ ಆದೇಶವನ್ನು ತಡೆಹಿಡಿಯಲಾಗಿದ್ದರಿಂದ, ಆ.ಸ.ನೌ ರವರಿಗೆ ಕಡ್ಡಾಯವಾಗಿ ನಿವೃತ್ತಿಗೊಳಿಸಿದ ಆದೇಶವು ಇನ್ನು ಅಮಲುಬಜಾವಣೆ ಆಗಿರುವುದಿಲ್ಲ ಅಂತಾ ದಾಖಲಾತಿಯಿಂದ ಕಂಡುಬರುತ್ತದೆ.**

21. ಈ ಮೇಲ್ಕಂಡ ಕಾರಣಗಳು ಮತ್ತು ಚರ್ಚೆಯಿಂದಾಗಿ, ಆ.ಸ.ನೌ ರವರ ವಿರುದ್ಧ ಆಪಾದಿಸಲಾದ ಆರೋಪಗಳನ್ನು ವಿಚಾರಣಾ ಪ್ರಾಧಿಕಾರವು ರುಜುವಾತುಪಡಿಸುವಲ್ಲಿ ಸಫಲವಾಗಿರುತ್ತದೆ ಎನ್ನುವ ನಿರ್ಣಯಕ್ಕೆ ಬಂದು ಅಂಶ-1ನ್ನು ಸಕಾರಾತ್ಮಕವಾಗಿ ಉತ್ತರಿಸಿರುತ್ತೇನೆ.

22.**ಅಂಶ–2: ಈ ಮೇಲ್ಕಂಡ ಕಾರಣಗಳಿಗಾಗಿ, ಈ ಕೆಳಕಂಡಂತೆ** ನಿರ್ಣಯಿಸಲಾಗಿದೆ.

## ನಿರ್ಣಯ

ಆ.ಸ.ನೌಕರ ಶ್ರೀ. **ರಾಜಕುಮಾರ,** ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕಲಿಯೂರು ಗ್ರಾಮ ಪಂಚಾಯಿತಿ, ಟಿ. ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ ರವರ ವಿರುದ್ಧ ಆಪಾದಿಸಲಾದ ಆರೋಪಗಳನ್ನು ರುಜುವಾತುಪಡಿಸಲು ಶಿಸ್ತುಪ್ರಾಧಿಕಾರವು ಸಫಲವಾಗಿರುತ್ತದೆ ಎಂದು ನಿರ್ಣಯಿಸಲಾಗಿದೆ.

**ಆ.ಸ.ನೌರವರ ನಿವೃತ್ತಿ ದಿನಾಂಕ: 31/05/2026 ಆಗಿರುತ್ತದೆ.**

ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತ ರವರಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ಕಛೇರಿಗೆ ಆದೇಶಿಸಲಾಗಿದೆ.

29/3.

**(ಸುದೇಶ್ ರಾಜಾರಾಮ್ ಪರದೇಶಿ)**
ಅಪರ ನಿಬಂಧಕರು ವಿಚಾರಣೆಗಳು–14,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

# ANNEXURES

| Sl. No. | Particulars of Documents | |
|---|---|---|
| 1 | **Witness examined on behalf of the Disciplinary Authority** | |
| | **PW-1** | Smt. Shantha D/o Chikkusu, Kaliyuru, T. Narasipura, Mysore. |
| | **PW-2** | Sri. P.A Gopala S/o P. Anantharamaiah, Joint Secretary to Hon'ble Chief Minister, Bengaluru. |
| | **PW-3** | Sri. K.B Prabhuswamy S/o K.H Basavanayak, Chief Development Officer, Zilla Panchayath, Chamarajanagar. |
| | **PW-4** | Sri. Shivashankar S/o Puttaiah, CEO, Chikkaballapura. |
| 2 | **Documents marked on behalf of the Disciplinary Authority Ex.P-1 to Ex.P-8** | |
| | **Ex.P.1 & 1(a)** | Complaint given to this institution dtd: 22/07/2014 with Signature. |
| | **Ex.P.2** | Form No.1. |
| | **Ex.P.3** | Form No.2 (Affidavit). |
| | **Ex.P.4** | Documents pertaining to Ex.P.1. |
| | **Ex.P.5 & 5(a)** | Letter dtd: 13/11/2014 submitted by CEO, Zilla Panchayath, Mysore with Signature. |
| | **Ex.P.6& 6(a)** | Inspection Report with Signature. |
| | **Ex.P.7& 7(a)** | NOC with Signature. |

| | | |
|---|---|---|
| | **Ex.P.8 & 8(a)** | Letter dtd: 28/03/2017 submitted by CEO, Zilla Panchayath, Mysore with Signature. |

Dated this the 29th March, 2022

(SUDESH RAJARAM PARADESHI)
Additional Registrar Enquiries-14,
Karnataka Lokayukta,
Bangalore.